**◆ ಯಕ್ಷಗಾನವನ್ನು ಉಸಿರೆಂದೇ ಭಾವಿಸಿ ನಿರಂತರ ಎಪ್ಪತ್ತು ವರ್ಷಗಳ ಕಾಲ ತಿರುಗಾಟ ಮಾಡಿರುವಿರಿ. ಈ ದೀರ್ಘ ಪಯಣದಲ್ಲಿ ನೀವು ಪ್ರಸಿದ್ಧ ಕಲಾವಿದರೆಂದು ಗುರುತಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದೀರಿ. ಈಗ ನಿವೃತ್ತಿಯ ಸಂದರ್ಭದಲ್ಲಿ, ನಿಮ್ಮ ಮನಸ್ಸಿನಲ್ಲಿರುವ ಭಾವನೆಗಳೇನು?**

ಯಕ್ಷಗಾನ ಕ್ಷೇತ್ರದಲ್ಲಿ ನನಗೆ ಹೆಸರೇನಾದ್ರೂ ಬಂದಿದ್ರೆ ಅದಕ್ಕಾಗಿ ನಾನು ಶ್ರಮ ಹಾಕಿದ್ದೇನೆ ಎನ್ನುವುದು ನಿಜ. ಆದರೆ, ನಾನು ಸಂಪಾದನೆಗಾಗಿ ಶ್ರಮ ಹಾಕಿದ್ದೇನೆ. ಈ ಕಲೆಯನ್ನು ಬೆಳೆಸುತ್ತೇನೆಂದೋ, ಕಲಾಕ್ಷೇತ್ರಕ್ಕೆ ಕೊಡುಗೆ ಕೊಡುತ್ತೇನೆಂದೋ ನನ್ನ ಮನಸ್ಸಿನಲ್ಲಿ ಯಾವ ಧೋರಣೆಯೂ ಇರಲಿಲ್ಲ. ಈ ಹೊಟ್ಟೆ ತುಂಬಿಸಲು, ನನ್ನನ್ನು ನಂಬಿದ ಹೆಂಡತಿ ಮತ್ತು ಮಕ್ಕಳ ಹೊಟ್ಟೆಹೊರೆಯಲು ನಾನು ದುಡಿಯಲೇಬೇಕಿತ್ತು. ಯಕ್ಷಗಾನ ಮೇಳದಲ್ಲಿ ನಿರಂತರ ಎಪತ್ತು ವರ್ಷಗಳ ಕಾಲ ತಿರುಗಾಟ ಮಾಡಿದ್ದೇನೆ. ಗಾಡಿಯಲ್ಲಿ, ತಲೆಹೊರೆಯಲ್ಲಿ ಮೇಳದ ಸಾಮಾನುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ದು ಆಟಗಳನ್ನು ಮಾಡಿದ ಕಾಲದಿಂದ, ಇತ್ತೀಚೆಗೆ ಲಾರಿಗಳಲ್ಲಿ ಸಾಮಾನು ಸಾಗಿಸಿ, ಕಾರುಗಳಲ್ಲಿ ಪ್ರಯಾಣಿಸುವವರೆಗೆ ದೀರ್ಘ ಕಾಲವನ್ನು ಇದೇ ಕ್ಷೇತ್ರದಲ್ಲಿ ಸವೆಸಿದ್ದೇನೆ. ಎಲ್ಲ ಸಂದರ್ಭಗಳಲ್ಲೂ ದುಡಿಮೆಯೇ ನನ್ನ ಕೇಂದ್ರವಾಗಿತ್ತು. ಮೇಳದ ತಿರುಗಾಟ ಇಲ್ಲದೇ ಇದ್ದಾಗ, ಎಲ್ಲಿಯಾದರೂ ಕಾರ್ಯಕ್ರಮದ ಅವಕಾಶ ಸಿಕ್ಕೀತೇ ಎಂದು ಹುಡುಕಿ, ಅನ್ನದ ದಾರಿ ಮಾಡಿಕೊಳ್ಳುತ್ತಿದ್ದೆ. ನನ್ನ ಹೊಟ್ಟೆ ಹೊರೆಯುವುದು, ಸಂಸಾರದ ಜವಾಬ್ದಾರಿ ನಿಭಾಯಿಸುವುದನ್ನೇ ಕೇಂದ್ರವಾಗಿರಿಸಿಕೊಂಡು ನಾನು ಏಕ ದೃಷ್ಟಿಯಿಂದ ಸಾಗಿದ್ದೇನೆ ಅನಿಸುತ್ತದೆ.

ಮೇಳಗಳ ಆಟಗಳೆಂದರೆ ಅಲ್ಲಿಗೆ ಜನರು ಬರಬೇಕಲ್ಲ. ಅವರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಆಟ ನೋಡಬೇಕಾದರೆ ನಾವು ಪ್ರದರ್ಶನವನ್ನು ಚೆನ್ನಾಗಿ ನಿರ್ವಹಿಸಬೇಕು. ಟಿಕೇಟು ಖರೀದಿಸಿ ಆಟ ನೋಡುವವರಿಗೆ ಮೋಸವಾಗಬಾರದು. ಇದೊಂದು ಮನರಂಜನೆಯ ಕಲೆಯಂತೆ ತೋರಿದರೂ, ಅಲ್ಲಿ ನೀತಿ ಹಾಗೂ ಜೀವನಮೌಲ್ಯಗಳ ಪಾಠವಿದೆ ಎಂಬ ಕಾರಣಕ್ಕಾಗಿಯೇ ಪ್ರೇಕ್ಷಕರು ಯಕ್ಷಗಾನವನ್ನು ಆಯ್ಕೆ ಮಾಡಿಕೊಂಡು ನೋಡುತ್ತಾರೆ. ಪ್ರದರ್ಶನವನ್ನು ಚಂದಗಾಣಿಸುವ ಜವಾಬ್ದಾರಿ ವೃತ್ತಿಪರ ಕಲಾವಿದನ ಮೇಲಿರುತ್ತದೆ. ಆ ನಿಟ್ಟಿನಲ್ಲಿ ನಾನು ಯೋಚಿಸಿ, ನನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಿದ್ದುಂಟು. ಕಲಾಕ್ಷೇತ್ರದಲ್ಲಿ ಇನ್ನಷ್ಟು ಮತ್ತಷ್ಟು ಅಧ್ಯಯನ ಮಾಡುವ, ಒಳ್ಳೆಯ ವಿಚಾರಗಳನ್ನು ಯಕ್ಷಗಾನ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವನ್ನೂ ಮಾಡಿದ್ದೇನೆ.

**◆ ಮೇಳದ ತಿರುಗಾಟದ ಸಂದರ್ಭದ ಅನುಭವಗಳನ್ನು ಹಂಚಿಕೊಳ್ಳಬಹುದಾ?**

ಎಲ್ಲ ಕಲಾವಿದರಂತೆಯೇ ನನ್ನದೂ ಅನುಭವಗಳು. ವಿಶೇಷವೇನಿಲ್ಲ. ನಿಮಗೆ ಹೇಳಬೇಕೆಂದರೆ, ಧರ್ಮಸ್ಥಳಕ್ಕೆ ಬಾಹುಬಲಿ ಮೂರ್ತಿಯನ್ನು ಸಾಗಿಸಿದ ಸಂದರ್ಭದ ಅನುಭವವೊಂದನ್ನು ಹೇಳುತ್ತೇನೆ. ಧರ್ಮಸ್ಥಳದ ಬೆಟ್ಟದ ಮೇಲೆ ಬಾಹುಬಲಿಯ ಮೂರ್ತಿಯನ್ನು ಸ್ಥಾಪನೆ ಮಾಡಲು ಉದ್ದೇಶಿಸಿದ ಬಳಿಕ ಕಾರ್ಕಳದಲ್ಲಿ ಮೂರ್ತಿಯ ಕೆತ್ತನೆ ಆರಂಭವಾಗಿತ್ತು. ಅಲ್ಲಿ ಸಿದ್ಧಗೊಂಡ ಮೂರ್ತಿಯನ್ನು ಧರ್ಮಸ್ಥಳದವರೆಗೆ ಸಾಗಿಸಿದ ಮಹಾನ್‌ಯಾತ್ರೆ ಈಗಿರುವ ಎಲ್ಲ ಹಿರಿಯರಿಗೂ ಚೆನ್ನಾಗಿ ನೆನಪಿರಬಹುದು. ಮಂಗತ್‌ರಾಮ್ ಕಂಪನಿಯು ಈ ವಿಗ್ರಹ ಸಾಗಿಸಲು ದೊಡ್ಡ ಟ್ರಾಲಿ ಸಿದ್ಧಪಡಿಸಿತ್ತು. ಟ್ರಾಲಿಗೆ ವಿಗ್ರಹವನ್ನು ಏರಿಸಲು ಸಾವಿರಾರು ಜನರು ಸೇರಿ ಭಾರೀ ಪ್ರಯಾಸ ಪಟ್ಟರೂ ಸಾಧ್ಯವಾಗಲಿಲ್ಲ. ಕೊನೆಗೆ ಯಕ್ಷಗಾನ ಮೇಳದ ಗಣಪತಿ ದೇವರನ್ನು ವಿಗ್ರಹ ನಿರ್ಮಾಣ ಜಾಗಕ್ಕೆ ಕೊಂಡೊಯ್ದು ಪೂಜೆ ಸಲ್ಲಿಸುವಂತೆ ಒಂದು ಸೂಚನೆ ಬಂತು. ಹಾಗೆ ದೇವರನ್ನು ಕೊಂಡೋಗಿ ಅಲ್ಲಿಯೇ ಪೂಜೆ ಸಲ್ಲಿಸಿದ ಬಳಿಕ ಮೇಳವು ತನ್ನ ನಿಗದಿತ ಯಕ್ಷಗಾನ ಪ್ರದರ್ಶನದ ಜಾಗಕ್ಕೆ ತೆರಳಿತು. ಕಾಕತಾಳೀಯವೋ ಏನೋ, ವಿಗ್ರಹವನ್ನು ಹೊತ್ತ ಟ್ರಾಲಿಯು ಅದೇ ಯಕ್ಷಗಾನ ನಡೆಯುವ ಜಾಗವನ್ನೇ ಹಾದು ಹೋಗಬೇಕಾಗಿ ಬಂತು. ದೇವರೇ ವಿಗ್ರಹವನ್ನು ತರುತ್ತಿದ್ದಾರೆ ಎಂದು ಜನರು ಮಾತನಾಡಿಕೊಂಡರು. ನಂತರದ ದಿನಗಳಲ್ಲಿ ವಿಗ್ರಹವು ಸಾಗುವ ದಾರಿಯಲ್ಲಿಯೇ ಮೇಳವೂ ಸಾಗಿ ಎಲ್ಲೆಲ್ಲಿ ರಾತ್ರಿ ವಿಗ್ರಹ